# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 41 ಸೇನಿ 2002.

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:09-01-2003.

## ಸುತ್ತೋಲೆ

ವಿಷಯ: ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 15 ರಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಿಸುವ ಕುರಿತು — ಸ್ಪಷ್ಟೀಕರಣ.

ಉಲ್ಲೇಖ: (1) ದಿನಾಂಕ:25-08-1999 ರ ಸುತ್ತೋಲೆ ಸಂಖ್ಯೆ:ಸಿಆಸುಇ 37 ಸೇನಿ 99.
(2) ದಿನಾಂಕ:05-09-2002 ರ ಸುತ್ತೋಲೆ ಸಂಖ್ಯೆ: ಸಿಆಸುಇ 41 ಸೇನಿ 2002.

---

ಉಲ್ಲೇಖ (1) ರಲ್ಲಿರುವ ದಿನಾಂಕ:25-08-1999 ರ ಸುತ್ತೋಲೆಯಲ್ಲಿ ನಿಗಮ : ಮಂಡಳಿ : ಕಂಪನಿ : ವಿಶ್ವ ವಿದ್ಯಾಲಯ : ಸಾರ್ವಜನಿಕ ಉದ್ದಿಮೆಗಳು ಹಾಗೂ ಇತರೆ ಸ್ವಾಯತ್ತ ಸಂಸ್ಥೆಗಳ ನೌಕರರನ್ನು ರಾಜ್ಯ ಸರ್ಕಾರದ ತಾಂತ್ರಿಕ ವಿದ್ಯಾರ್ಹತೆ ಬೇಕಾಗುವ ಹುದ್ದೆಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ಮತ್ತು ಆರ್ಥಿಕ ಇಲಾಖೆಗಳೊಡನೆ ಸಮಾಲೋಚಿಸಿದ ನಂತರ, ಅವರುಗಳನ್ನು ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 15(1) (ಬಿ) (ii) ರಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಿಸುವ ಬಗ್ಗೆ ಪರಿಶೀಲಿಸಬಹುದೆಂದು ತಿಳಿಸಲಾಗಿದೆ.

2. ಉಲ್ಲೇಖ (2) ರಲ್ಲಿರುವ ದಿನಾಂಕ:05-09-2002 ರ ಸುತ್ತೋಲೆಯಲ್ಲಿ ಈ ರೀತಿ ಗುತ್ತಿಗೆ ಆಧಾರದ ಮೇಲೆ ನೇಮಿಸಬಹುದಾದ ನೌಕರರಿಗೆ ನೀಡಬಹುದಾದ ವೇತನ ಮತ್ತು ಭತ್ಯೆಗಳ ಬಗ್ಗೆ ಮಾರ್ಗಸೂಚನೆಗಳನ್ನು ಹೊರಡಿಸಲಾಗಿದೆ.

3. ಉಲ್ಲೇಖ (1) ರಲ್ಲಿರುವ ದಿನಾಂಕ:25-08-1999 ರ ಸುತ್ತೋಲೆಯಲ್ಲಿ ಯಾವ ಯಾವ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಬಹುದೆಂಬ ಬಗ್ಗೆ ಸ್ಪಷ್ಟವಾದ ಮಾರ್ಗಸೂಚನೆಗಳನ್ನು ಹೊರಡಿಸಲಾಗಿರುವುದರಿಂದ, ಇನ್ನು ಮುಂದೆ ಈ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ಯೊಡನೆ ಸಮಾಲೋಚಿಸುವ ಅವಶ್ಯಕತೆ ಇರುವುದಿಲ್ಲ. ಸಂಬಂಧಪಟ್ಟ ಆಡಳಿತ ಇಲಾಖೆಗಳೇ ಗುತ್ತಿಗೆ ಆಧಾರದ ಮೇಲೆ ನೇಮಿಸುವ ಪ್ರಸ್ತಾವನೆಯನ್ನು ದಿನಾಂಕ:25-08-1999 ಮತ್ತು ಈ ವಿಷಯ ಕುರಿತು ತದನಂತರ ಹೊರಡಿಸಲಾದ ಸುತ್ತೋಲೆಗಳಡಿಯಲ್ಲಿ ಪರಿಶೀಲಿಸಿ, ಆರ್ಥಿಕ ಇಲಾಖೆಯೊಡನೆ ಸಮಾಲೋಚಿಸಿದ ನಂತರ ಸೂಕ್ತ ನಿರ್ಧಾರ ತಳೆಯಬಹುದೆಂದು ಎಲ್ಲಾ ಇಲಾಖೆಗಳಿಗೆ ಸೂಚಿಸಲಾಗಿದೆ.

(ಪಿ.ಕೆ. ಬಾಬುರಾವ್)
ಸರ್ಕಾರದ ಅಧೀನ ಕಾರ್ಯದರ್ಶಿ-1
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು).

ಗೆ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು : ಕಾರ್ಯದರ್ಶಿಗಳು.
ಸರ್ಕಾರದ ಎಲ್ಲಾ ಅಪರ: ಜಂಟಿ: ಉಪ : ಅಧೀನ ಕಾರ್ಯದರ್ಶಿಗಳು.
ವಾರಪತ್ರಿಕೆ.

ಉ.9103.